# ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಜನಜಾಗೃತಿ
# ‘ ತೆರೆದ ಮನೆ ಕಾರ್ಯಕ್ರಮ ’

(Open House Programme)

ಆತ್ಮೀಯರೇ,

ಮಕ್ಕಳ ಸಹಾಯವಾಣಿ, ಚೈಲ್ಡ್‌ಲೈನ್–1098 ಎಂಬುವುದು ಸಂಕಷ್ಟದಲ್ಲಿರುವ ಮಕ್ಕಳ ರಕ್ಷಣೆ ಹಾಗೂ ಪೋಷಣೆಗಾಗಿ ಸಕಾಲದಲ್ಲಿ ಸೇವೆಯನ್ನು ಒದಗಿಸುವ ಕೇಂದ್ರ ಸರಕಾರದ ಒಂದು ಯೋಜನೆಯಾಗಿದೆ. ಸಹಾಯದ ಅಗತ್ಯವಿರುವ ಮಕ್ಕಳಿಗೆ ದಿನದ 24 ಗಂಟೆಯೂ ಹಗಲು ಮತ್ತು ರಾತ್ರಿ, ಉಚಿತ ಮತ್ತು ತುರ್ತು ಸೇವೆಯನ್ನು ನೀಡುತ್ತದೆ. ಕೇಂದ್ರ ಸರಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ ಹಾಗೂ ರಾಜ್ಯ ಸರಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಸರಕಾರೇತರ ಸಂಘ ಸಂಸ್ಥೆಗಳು, ಸ್ಥಳೀಯ ಆಡಳಿತ, ಶೈಕ್ಷಣಿಕ ಸಂಸ್ಥೆಗಳ ಬೆಂಬಲಿತ ವ್ಯವಸ್ಥೆಗಳ ಸಹಯೋಗದೊಂದಿಗೆ ಕಾರ್ಯನಿರ್ವಹಿಸುತ್ತದೆ.
ಪ್ರಮುಖವಾಗಿ:

- ಕಳೆದು ಹೋದ ಮಕ್ಕಳು,
- ದುರಾಚಾರ ಹಾಗೂ ದೌರ್ಜನ್ಯಕ್ಕೆ ಒಳಗಾದ ಮತ್ತು ಹಿಂಸೆಗೆ ಒಳಗಾದ ಮಕ್ಕಳು,
- ಬಾಲಕಾರ್ಮಿಕ ಮತ್ತು ವಿಕಲಾಂಗ ಮಕ್ಕಳು,
- ಪರಾರಿಯಾದ ಮಕ್ಕಳು,
- ಮಗುವೊಂದು ಅಸೌಖ್ಯವಾಗಿದ್ದು, ಒಂಟಿಯಾಗಿರುವುದನ್ನು ಕಂಡಾಗ,
- ಆರೋಗ್ಯದ ಸಹಾಯ ಬೇಕಾದ ಮಕ್ಕಳು,
- ನಿರ್ಗತಿಕ ಹಾಗೂ ಕಾಣೆಯಾದ ಮಕ್ಕಳಿಗೆ ಜಾಗರೂಕತೆ ಮತ್ತು
- ಸಂರಕ್ಷಣೆಯ ಅಗತ್ಯತೆ ಇದ್ದಲ್ಲಿ,
- ಮಕ್ಕಳ ಮಾರಾಟ ಮತ್ತು ಸಾಗಾಟ ತಡೆಯುವ ನಿಟ್ಟಿನಲ್ಲಿ,

ಹೀಗೆ ಮಕ್ಕಳ ತುರ್ತು ನೆರವಿಗಾಗಿ, 1098 ದೂರವಾಣಿ ಸಂಖ್ಯೆ ಪೋನ್ ಕರೆಯನ್ನು ಮಾಡಿದಲ್ಲಿ ಸೂಕ್ತ ವ್ಯವಸ್ಥೆಯನ್ನು ಮಾಡಿ ಮಕ್ಕಳ ಸಂರಕ್ಷಣೆ ಮತ್ತು ಪೋಷಣೆ ಮಾಡುವಲ್ಲಿ ಮಕ್ಕಳ ಸಹಾಯವಾಣಿ, ಚೈಲ್ಡ್‌ಲೈನ್ –1098 ನಿರಂತರ ತನ್ನನ್ನು ತೊಡಗಿಸಿಕೊಂಡಿರುತ್ತದೆ. ಈ ಬಗ್ಗೆ ಜನಜಾಗೃತಿಯನ್ನು ಮೂಡಿಸುವ ಸಲುವಾಗಿ ಚೈಲ್ಡ್‌ಲೈನ್ ಮಂಗಳೂರು ಕಾರ್ಯಕ್ರಮವೊಂದನ್ನು ಏರ್ಪಡಿಸಿರುತ್ತದೆ.

**ದಿನಾಂಕ: 27–02–2018 ನೇ ಮಂಗಳವಾರ**

**ಸಮಯ: ಅಪರಾಹ್ನ:02.00 ಗಂಟೆಗೆ**

**ಸ್ಥಳ : ದ.ಕ.ಜಿ.ಪಂ.ಹಿ.ಪ್ರಾ.ಶಾಲೆ ಪಿಲಿಚಂಡಿಕಲ್ಲು, ಗುರುವಾಯನಕೆರೆ**

**ನೀವೂ ಬನ್ನಿ, ಇತರರನ್ನು ಕರೆ ತನ್ನಿ,**

**ನಾವೆಲ್ಲ ಒಂದಾಗಿ ಸಂಕಷ್ಟದಲ್ಲಿರುವ ಮಕ್ಕಳ ಸಂರಕ್ಷಣೆಯ ಕಾರ್ಯದಲ್ಲಿ ಭಾಗಿಯಾಗೋಣ,**

*ಸಹಕಾರ: ಅಂಗನವಾಡಿ ಕೇಂದ್ರ, ಸ್ಥಳೀಯಾಡಳಿತ, ಸ್ವಸಹಾಯ ಸಂಘಗಳು, ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ.*


**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ:**

**‘ಪಡಿ’ ಮಕ್ಕಳ ಸಹಾಯವಾಣಿ, ಚೈಲ್ಡ್‌ಲೈನ್–1098, ಕೊಲಾಸೊ ಆಸ್ಪತ್ರೆ ಬಳಿ ಬೆಂದೂರುವೆಲ್**

**ಮಂಗಳೂರು –575002. ದೂರವಾಣಿ ಸಂಖ್ಯೆ:1098/0824–2437795**